646 (527) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಂಪಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಇ) ಇದರ ಅಂದಾಜು ವೆಚ್ಚವೆಷ್ಟು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಕ್ಕೆ ಸದರಿ ಪ್ರಸ್ತಾವನೆಗಳು ಬಂದಿರುತ್ತವೆ

ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) ಉದ್ಭವಿಸುವುದಿಲ್ಲ

647 (529) ಶ್ರೀ ತಿಮ್ಮರಾಯಪ್ಪ ಕೆ ಎಂ (ಪಾವಗಡ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು?

ಆ) ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರ ತೀರ್ಮಾನಿಸಿದೆಯೇ?

ಇ) ಹಾಗಿದ್ದಲ್ಲಿ, ಪಾವಗಡ ತಾಲ್ಲೂಕಿನಲ್ಲಿ ಅವಶ್ಯ ಇರುವ ಗ್ರಾಮಗಳಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಲಿ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಉ) ಹಾಗಿದ್ದಲ್ಲಿ, ಕೊಂಡೇತಿಮ್ಮನಹಳ್ಳಿಯ ಪಶು ವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 295 ಪಶು ಆಸ್ಪತ್ರೆಗಳನ್ನೊಳಗೊಂಡಂತೆ 3878 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

ಆ) ಡಾ ನಂಜುಂಡಪ್ಪ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ರಾಜ್ಯದಲ್ಲಿ 318 ಪಶುವೈದ್ಯ ಸಂಸ್ಥೆಗಳು ಕೊರತೆ ಇವೆ ಇವುಗಳು ಯಾವ ತಾಲ್ಲೂಕುಗಳಲ್ಲಿ ಕೊರತೆ ಇವೆಯೇ ಆ ತಾಲ್ಲೂಕುಗಳಲ್ಲಿ ಆದ್ಯತೆ ಮೇಲೆ 8 ವರ್ಷಗಳ ಅವಧಿಯಲ್ಲಿ ತೆರೆಯಲು ಕಾರ್ಯಕ್ರಮ ಸರ್ಕಾರದಲ್ಲಿದೆ

ಇ) ಪಾವಗಡ ತಾಲ್ಲೂಕು ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ಅತಿ ಹೆಚ್ಚು ಹಿಂದುಳಿದ ತಾಲ್ಲೂಕು ಆಗಿದ್ದು, 81,481 ಜಾನುವಾರು ಘಟಕಗಳಿವೆ ಪ್ರತಿ 5000 ಜಾನುವಾರುಗಳಿಗೆ ಒಂದು ಘಟಕದಂತೆ 16 ಪಶುವೈದ್ಯ ಸಂಸ್ಥೆಗಳಿರಬೇಕಾಗಿದೆ ಹಾಲಿ 17 ಸಂಸ್ಥೆಗಳು ಪಾವಗಡ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಾವಗಡ ತಾಲ್ಲೂಕು ಸೇರಿದಂತೆ ಪಶುವೈದ್ಯ ಶಾಲೆ ಕೊರತೆ ಇಲ್ಲದೆ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ತೆರೆಯಲು ಇನ್ನೂ ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ

ಈ) ಇಲಾಖೆಯಲ್ಲಿ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ / ಕೃತಕ ಗರ್ಭದಾರಣಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿದ್ದು ಹಂತ ಹಂತವಾಗಿ ಅನುಷ್ಠಾನವಾಗಬೇಕಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ವೇಳೆಯಲ್ಲಿ ಕೊಂಡೇತಿಮ್ಮನಹಳ್ಳಿಯನ್ನು ಮೇಲ್ದರ್ಜೆಗೇರಿಸಲು ಪರಿಗಣಿಸಲು ಕ್ರಮ ವಹಿಸಲಾಗುವುದು

648 (712) ಶ್ರೀ ಉಮಾಪತಿ ಎ ಎ (ಹೊಳಲ್ಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಹಾಗೂ ಪ್ರೌಢ (ಶಿಕ್ಷಣ) ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗ ವಿದ್ಯಾರ್ಥಿನಿಲಯಗಳು ಇವೆಯೇ?

ಆ) ಹಾಗಿದ್ದಲ್ಲಿ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?